# ಕೃತಿ ವಿಭೂತಿ

ಲೋಕದ ಸಮಸ್ತ 'ಕೃತಿ'ಗಳನ್ನು ಎರಡು ಬಗೆಯಾಗಿ ನಾವು ನೋಡಬಹುದು. ಒಂದು ಪ್ರಾಕೃತಿಕವಾದುದು; ಮತ್ತೊಂದು ರಚನಾತ್ಮಕವಾದುದು. ಮೊದಲನೆಯದು ನೈಸರ್ಗಿಕ, ಎರಡನೆಯದು ಮಾನುಷಿಕ. ಎಷ್ಟು 'ಕೃತಿ'ಗಳೊ ಅಷ್ಟು ಆಶಯಗಳು. ಕವಿ ಕುವೆಂಪು 'ಕೃತಿವಿಭೂತಿಗೆ ನಮೋ' ಎಂದು ಹೇಳಿದ್ದಾರೆ. ಇದು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಪ್ರಾರಂಭದಲ್ಲೇ ಬರುತ್ತದೆ. ಕವಿ ಇಲ್ಲದಿದ್ದರೆ; 'ಕೃತಿ'ಗೆ ಅವಕಾಶವಿಲ್ಲವಷ್ಟೆ. ಕೃತಿಯೊಂದು ಮೈಬಣ್ಣ ಪಡೆದು ಹೊರಬರುವುದಕ್ಕೆ ಕವಿಯ 'ವಿಭೂತಿ' ಪ್ರಜ್ಞೆ ಬೇಕೇ ಬೇಕು. 'ಭೂತಿ' ಎಂದರೆ ಆಗುವುದೆಂದು ಅರ್ಥ. ಕೃತಿಯು ಕವಿಯ 'ವಿಭೂತಿ'ಯಲ್ಲಿ ಮೈಪಡೆದು ಲೋಕ ಮೋಹಕವಾಗುತ್ತದೆ! ಆಗ ಕವಿಕೃತಿಗಳು ಅವಿಚ್ಛಿನ್ನವಾಗಿ ಬಿಡುತ್ತವೆ.

ಭಾರತೀಯ ಸಾಹಿತ್ಯದಲ್ಲಿ ಕವಿ 'ಕೃತಿ'ಗಳಿಗೆ ಕೊನೆಯಿಲ್ಲ. ಅವು ನಿತ್ಯನಿರಂತರ. ಎಷ್ಟು ಪ್ರಕಾರಗಳೊ ಎಷ್ಟು ಬಗೆಗಳೊ ಅಷ್ಟಷ್ಟು ಆಶಯಗಳು! ಕವಿಯು 'ಕೃತಿ'ಯಲ್ಲಿ ಅಂತರ್ಗತನಾಗುತ್ತಾನೆ. ಕೃತಿಯು ಲೋಕದಲ್ಲಿ ಹರಡಿ ನಿಮಗ್ನಗೊಳ್ಳುತ್ತದೆ. ಸಹೃದಯ ಸಮಾಜವು ಕವಿಕೃತಿಯನ್ನು ಎತ್ತಿಕೊಂಡು ಪರಿಪೋಷಿಸುತ್ತದೆ. ಇದು 'ಭಾಷಿಕಲೋಕ'ಕ್ಕೆ ಸಂಬಂಧಿಸಿದ್ದು. ಆದರೆ, 'ಕೃತಿ' ಸಂಪತ್ತು ಕೇವಲ ಭಾಷಿಕ ಜಗತ್ತಿಗೆ ಮಾತ್ರ ಸೇರಿದ್ದಲ್ಲ. ಅದು ನಾದ–ವರ್ಣ, ಶಿಲ್ಪ ಮುಂತಾದ ಮೂರ್ತಾಮೂರ್ತಾ ಜಗತ್ತಿಗೂ ಸೇರಿದ್ದು. ಭಾಷೆಯಲ್ಲಿ ನಾದವುಂಟು. ಶಿಲ್ಪ–ವಾಸ್ತು ಮುಂತಾದವುಗಳಲ್ಲೂ ನಾದದ ಬಗೆಯುಂಟು! ಗಾಳಿಯ ಸುಳಿಯಲ್ಲೂ 'ಸುನಾದ' ಉಂಟಷ್ಟೆ. 'ನಾದ' ಎಂಬುದು ನಮ್ಮೆಲ್ಲರ ಮನಃಸ್ತರದ ಬಿತ್ತರದಲ್ಲಿ ಬಂದು ಸೇರುತ್ತದೆ. ಇಲ್ಲಿ ಆಹತ ನಾದವೂ ಉಂಟು; ಅನಾಹತ ನಾದವೂ ಉಂಟು. ಆದರೆ, ಕಿವಿಯು ಅದನ್ನು ಆಲಿಸಲು ಸಿದ್ಧವಾಗಿರಬೇಕು ಅಷ್ಟೆ. ಪ್ರತಿಯೊಂದು ವಸ್ತುವೂ ನಾದ ಎಂಬ 'ಕೃತಿ'ಯನ್ನು ಹೊರಡಿಸುತ್ತದೆ. ಎಲ್ಲ ಬಗೆಯ ನಾದಗಳಿಗೂ ಪ್ರಕೃತಿಯೇ ಪರಮಶ್ರುತಿಯಾಗಿ ಕೈಹಿಡಿದಿರುತ್ತೆಂಬುದನ್ನು ನಾವು ಈ ಸಂದರ್ಭದಲ್ಲಿ ಗಮನಿಸಬೇಕು!

ಕವಿಯು ಕಾವ್ಯಭಾಷೆಯೆಂಬ 'ಕೃತಿ'ಯ ಮೂಲಕ ವಸ್ತುವಿಗೆ ಆಕಾರವನ್ನು ನೀಡುತ್ತಾನೆ. ಆಗ ಆಕಾರದ ಚಮತ್ಕೃತಿಗೆ ಲೋಕವು ತಣಿಯುತ್ತದೆ. ಸಹೃದಯ ಮಾನವನ 'ಶೋಕಮೋಹವನಳಿಸಿ' ಬೆರಗನ್ನು ಪಡುತ್ತದೆ. ಅದೇ ರೀತಿ, ಮಹಾಶಿಲ್ಪಿಯೊಬ್ಬ ಬೃಹನ್ಮೂರ್ತಿಯನ್ನು ಕಡೆದು, ನಿರ್ಮಿಸಿ ಶಿಲ್ಪಕಲೆಯ ಮಹೋನ್ನತಿಯನ್ನು ಲೋಕಕ್ಕೆ ಸಾರುತ್ತಾನೆ. ಕುವೆಂಪು ಅವರೊಮ್ಮೆ ಶ್ರವಣಬೆಳಗೊಳದ ಶ್ರೀಗೊಮ್ಮಟೇಶ್ವರನನ್ನು ನೋಡಿ 'ಆರೋ ತೆಕ್ಕನೆ ಬಾಯ್ಮುಚ್ಚಿ ಹಿಡಿದಂತೆ ಮೌನಭಾರದಿ ಮಾತು ಮೂರ್ಛೆ ಹೋಗಿಹುದಿಲ್ಲಿ' ಎಂದು ನುಡಿದಿದ್ದಾರೆ. ಇದು ಬೃಹನ್ಮೂರ್ತಿಯಿಂದ ರಸವಶ ಆಗುವ ಒಂದು ಪರಿ. ಇನ್ನು ಸಂಗೀತ ಕಲಾವಿದನೊಬ್ಬನ ಗಾಯನವನ್ನೋ ವಾದನವನ್ನೊ ಕೇಳಿ ಅಲೌಕಿಕ ವಿಲಕ್ಷಣಭಾವಕ್ಕೆ ನಾವು ಏರುವುದುಂಟು. ನಾದದ ಗುಂಗು, ಅಧ್ಯಾತ್ಮದ ಮರ್ಮವನ್ನು ಎಚ್ಚರಿಸುತ್ತದೆ. ಇದು ಕೂಡಾ 'ನಾದಕೃತಿ'ಯೇ. ಇದು ನಾಭಿಯೆಂಬ 'ಪರಾ' ನೆಲೆಯಲ್ಲಿ ಹುಟ್ಟಿ ಹೃದಯವೆಂಬ 'ಪಶ್ಯಂತಿ' ನೆಲೆಗೆ ತಲುಪಿ; ಕಂಠವೆಂಬ ಮಧ್ಯಮದಲ್ಲಿ ತಣಿದು; ಬಾಯ್ಮುಖದಲ್ಲಿ 'ವೈಖರಿ'ಯಾಗಿ ಹೊರಬರುತ್ತದೆ. ಈ ವೈಖರಿಯು ನಾದದ ಅಪೂರ್ವ ಎಳೆಯನ್ನು ಕಿವಿಗೆ ಕೃತಿಸುತ್ತದೆ! ಸಂಗೀತಗಾರರು ಇದರ ಮರ್ಮವನ್ನು ಅರಿತು 'ಕೃತಿ' ನೆಲೆಗೆ ಏರಿಸಿ; ತಾವೂ ಏರುತ್ತಿದ್ದರು. ಕಳೆದ ಶತಮಾನದಲ್ಲಿ ಪ್ರಸಿದ್ಧ ಪಿಟೀಲು ವಾದಕರೊಬ್ಬರಿದ್ದರು. ಅವರ ಹೆಸರು ತಿರುಕ್ಕೋಡಿ ಕಾವಲ್ ಕೃಷ್ಣಯ್ಯರ್. ಇವರು ಮೈಸೂರು ವಾಗ್ಗೇಯಕಾರ ವಾಸುದೇವಾಚಾರ್ಯರ ಹಿರಿಯ ಸ್ನೇಹಿತರು. ಆಚಾರ್ಯರೊಮ್ಮೆ ಅವರನ್ನು ಕಂಡಾಗ ನಡೆದ ಪ್ರಸಂಗ ವಿಸ್ಮಯಕಾರಿಯಾದದ್ದು. ವಾಸುದೇವಾಚಾರ್ಯರು ಕೃಷ್ಣಯ್ಯರ್ ಮನೆಗೆ ಬಂದರಂತೆ. ಆಗ ಅಲ್ಲಿ ಶಿಷ್ಯನೊಬ್ಬ ಪಿಟೀಲು ನುಡಿಸುತ್ತಿದ್ದ. ಕೃಷ್ಣಯ್ಯರ್ ಆಚಾರ್ಯರನ್ನು ಸ್ವಾಗತಿಸಿ ಮಾತನಾಡುತ್ತಿರುವಾಗ 'ಅನುಮಂದ್ರ'ದಲ್ಲಿ ಶುದ್ಧನಾದವನ್ನು ಹೊರಡಿಸಲು ಸಾಧ್ಯವೇ? ಎಂಬ ಪ್ರಸ್ತಾಪ ಬಂದಿತಂತೆ. ಆಗ ತಿರುಕ್ಕೋಡಿ ಕಾವಲ್ ಕೃಷ್ಣಯ್ಯರ್ ಶಿಷ್ಯನಿಂದ ಪಿಟೀಲು ಪಡೆದು 'ಅನುಮಂದ್ರ' ಹಾಗೂ 'ಅತಿತಾರ'ದಲ್ಲಿ ಶುದ್ಧನಾದವನ್ನು ಹೊರಡಿಸಿ ತೋರಿಸಿದರಂತೆ. ಪಿಟೀಲಿನ ಶುದ್ಧನಾದದ ಸೊಬಗಿಗೆ ಆಚಾರ್ಯರು ಬೆರಗುಗೊಂಡರಂತೆ. ಇದು 'ಕೃತಿ'ಯ ಮತ್ತೊಂದು ಪ್ರಸಂಗ.

ಭಾಷೆ, ನಾದ, ವರ್ಣ ಇವು ಮೂರು ಪ್ರಾಕೃತಿಕ ಸಂಪತ್ತು. ಈ ಸಂಪತ್ತನ್ನು ಪಡೆದ ಕಲಾವಿದರು ತಮ್ಮ 'ಕೃತಿ'ಗಳ ಮೂಲಕ ಸಂಸ್ಕೃತಿಯ ಬೇರಿನಲ್ಲಿ ಅದನ್ನು ನೈವೇದ್ಯ ಮಾಡುತ್ತಾರೆ. ಇಲ್ಲಿ ಕವಿಜನಿತವಾದ ಕಾವ್ಯಭಾಷೆಗೂ ನಾವು 'ಕೃತಿ ವಿಭೂತಿಗೆ ನಮೋ' ಎಂದು ಹೇಳಬೇಕು. ನಾದದ ಮೂಲಕ ಸಂಗೀತದ ಮನೋಲೋಕವನ್ನು ತುಂಬುವ ಸಂಗೀತಗಾರನ 'ಕೃತಿವಿಭೂತಿಗೆ ನಮೋ' ಎಂದು ಮಣಿಯಬೇಕು. ವರ್ಣಗಳ ಬೆಡಗನ್ನು ಪ್ರಾಂಜಲವಾಗಿ ಬಿಡಿಸಿಬಿಡಿಸಿ 'ಕಲಾಕೃತಿ'ಯನ್ನು ರೂಪಿಸುವ ಮಹಾನ್ ವರ್ಣಕಲಾವಿದನಿಗೂ 'ಕೃತಿ ವಿಭೂತಿಗೆ ನಮೋ' ಎಂದು ಹೇಳಬೇಕು. ಯಾವುದೇ ಸಮಾಜವು ಕಾವ್ಯಭಾಷೆ, ನಾದಮಾಧುರ್ಯ, ವರ್ಣಬೆರಗುಗಳನ್ನು ತನ್ನಲ್ಲಿ ಆಹ್ವಾನಿಸಿಕೊಂಡರೆ, ಆ ಸಮಾಜಸಂಸ್ಕೃತಿಯು ಚೈತನ್ಯದ ಧಾರೆಯಲ್ಲಿ ಮಿಂದೇಳುತ್ತದೆ. ನಾವೀಗ ನಾದ, ಭಾಷೆ ಮತ್ತು ವರ್ಣ ಪ್ರಕೃತಿಗಳನ್ನು ಕ್ರಮವಿಪರ್ಯಯಗೊಳಿಸಿಕೊಂಡಿದ್ದೇವೆ. ಈಗ ನಾದ ವಿರೂಪವಾಗಿದೆ; ಭಾಷೆ ಸೂತಕದಲ್ಲಿ ನೆಲೆನಿಂತಿದೆ. ಮತ್ತೀಗ ವರ್ಣವು ಅಬ್ಬರದ ಧಾರೆಯಲ್ಲಿ ಮುಳುಗಿಹೋಗಿದೆ. ಸಂಸ್ಕೃತಿಯ 'ಕೃತಿ'ಗಳು ಹೀಗೆ ವಿರೂಪಗೊಂಡಂತೆಲ್ಲಾ 'ಪ್ರಕೃತಿ'ಯ ಮೇಲೆ ಅದರ ಪ್ರಭಾವ ಬೀರುವುದುಂಟು. ನಾವು ನಮ್ಮ ಪ್ರಾಕೃತಿಕ 'ಕೃತಿ'ಗಳನ್ನು ಉಳಿಸಿಕೊಳ್ಳುವ 'ಯುಗ'ದ ತುರ್ತಿನಲ್ಲಿ ತೊಡಗಬೇಕಿದೆ. ಆಗ ಜನಮಾನಸ ಪ್ರಜ್ಞೆ ಎಚ್ಚರಗೊಳ್ಳಲು ಸಾಧ್ಯವಾಗುತ್ತದೇನೊ?

■ ಪುರಂಜೀವಿ

## ಮಾತೇ ಮುತ್ತು

- ಅಧಿಕಾರ ಮನುಷ್ಯನ ಪಾಲಿಗೆ ಎಲ್ಲಕ್ಕಿಂತ ಮಿಗಿಲಾದ ಉತ್ತೇಜಕ.
  —ಹೆನ್ರಿ ಕಿಸಿಂಜರ್
- ಅನುಭವ, ಅಭ್ಯಾಸಗಳೆರಡರ ಕೊರತೆಯನ್ನು ಅಹಂಕಾರದಿಂದ ತುಂಬಲೆತ್ನಿಸುವುದು ವಿವೇಕಿಗಳಿಗೆ ತರವಲ್ಲ.
  —ಅನಕೃ
- ಅನೇಕ ದೇವರ ಬಗ್ಗೆ ಸಲ್ಲದ ಮೂಢನಂಬಿಕೆಗಳಿಗಿಂತ ನಾಸ್ತಿಕವಾದವೇ ಒಳ್ಳೆಯದು.
  —ಫ್ರಾನ್ಸಿಸ್ ಬೇಕನ್
- ಪುಟ್ಟ ಪುಟ್ಟ ಅನುಭವಗಳಿಂದ ದೊಡ್ಡ ಸತ್ಯವನ್ನು ತಿಳಿಯಬಹುದು.
  —ಸಾಯಿಬಾಬಾ
- ಮನುಷ್ಯನ ಹೃದಯದಲ್ಲಿ ಬಲವಾಗಿ ಬೇರು ಬಿಟ್ಟಿರುವ ಭಾವನೆ ಅಸೂಯೆ.
  —ಆರ್.ಬಿ. ಶೆರಿಡಿನ್
- ಗರ್ವವನ್ನು ಬಿಟ್ಟಾಗ ಸಹನೆಯು ಮನುಷ್ಯನಲ್ಲಿ ಮನೆ ಮಾಡುತ್ತದೆ.
  —ಮಹಾವೀರ
- ಅಹಿಂಸೆಯ ಹಿಂದೆ ಬಲಪ್ರಯೋಗ ಮಾಡುವ ಸಾಮರ್ಥ್ಯ ಇರಲೇಬೇಕು.
  —ಮಹಾತ್ಮ ಗಾಂಧಿ
- ಕನ್ನಡಿಗರಿಗೆ ಕನ್ನಡವೇ ಕೂಡಲಸಂಗಮ ಎಂಬ ಸುಬುದ್ಧಿ ನಮಗೆ ಬಂದಾಗ ಕನ್ನಡ ಉದ್ಧಾರವಾಗುತ್ತದೆ.
  —ಜಿ.ಪಿ. ರಾಜರತ್ನಂ
- ಗೆಲುವಿಗಿಂತ ಹೆಚ್ಚು ಸಂಭ್ರಮ ತರುವಂತಹ ಹಲವಾರು ಸೋಲುಗಳಿವೆ.
  —ಮಾಂಟೇನ್